ಸುಟ್ಟ ಹಪ್ಪಳವಾಗಿತ್ತು. ಮಲಗಿದರೂ ನಿದ್ರೆಯಿಲ್ಲ. ಮಲಗಿದಂತೆ ಬಿದ್ದುಕೊಂಡ. ಸರಿರಾತ್ರಿ ದಾಟಿತ್ತು. ನಾಗವೇಣಿ ಒಬ್ಬಳೆ ಮಾತನಾಡುತ್ತಿದ್ದಾಳೆ. ಅದೂ ಬೆಡ್‌ಶೀಟ್ ಒಳಗೇ! ಸಾಲದು ನಂಗೆ, ಬೇಕು, ಮೊಬೈಲ್‌ನಗೆ ನಿಂದ್ಕೆತೆ ಬಿಡು, ಗುರುವಾರ ಸಂತೆ, ಸಿನಿಮಾಕ್ಕಂತ ಬರ್ತೀನಿ ಬಾ ಹೊಂಡತವ... ಹೀಗೇ ಮಾತು... ಮಲಗಿದಲ್ಲೇ ನಾ ಹೆಣವಾಗಬಾರದೇ ಅನಿಸಿಬಿಡ್ತು ಕೆಂಚೀರಪ್ಪನಿಗೆ! ಸಣ್ಣ ಹಳ್ಳಿ ಮಾತಾಡಿದ್ರೇ ಕೇಳುತ್ತೆ, ಕೂಗಿದ್ರೆ ಕೇಳಲ್ವಾ? ಮಾನ ಮರ್ವಾದೆ ಮುಷ್ಟಿಲಿಟ್ಕಂಡ್ ಬದಿಕ್ ಮಂತ್ಯಾನ ನಮ್ದು. ಬಣ್ಣ ಅಂತ ಸುಣ್ಣಕ್ ಬಿದ್ನಾ? ದಿನಕ್ ನಾಕೈದ್ ಸಾರಿ ಫೋನ್ ಮಾಡಿ ಉಣ್ಣಕ್ಕಲ್ಲ ಕರೀತಾ ಇದ್ದದ್ದು; ತಾನುಣ್ಣಕ್ಕೆ! ಮನೆ ಹಾಳು ಮೊಬೈಲು ಡಬ್ಬದಾಗೂ ಏನೋ ಐತಂತೆ ಶಿವನೇ... ಅನ್ನೋ ಕೊರಗಲ್ಲಿ ಮೂರು ದಿನ ಮುಳ್ಳಿನ ಮೇಲೆ ನಡೆದಂಗ್ ಕಳೆದಿದ್ದ! ಸತ್ತು ಬಿಡಲಾ? ಸಾಯಿಸಿ ಬಿಡಲಾ? ಅವ್ವಂಗ್ ಹೇಳಲಾ? ಅವ್ವ ಹೇಳಿದ್ ಗಂಟು ಇದೇನಾ? ಅವ್ವಂಗ್ ಗೊತ್ತಿತ್ತಾ? ನಾ ಬೇಕಿರಲಿಲ್ಲವಾ? ಮೊಬೈಲ್ ಸಾಕಿತ್ತಾ? ಅವನನ್ನು ಕೊಂದು ಜೈಲಿಗ್ ಹೋಗಲಾ? ಅವ್ವ? ಹೊಟ್ಟೆಯಾಗ್ ಏನೋ ಐತಂತ ಓದ್ವಾರ ಹೇಳ್ತಿದ್ಲು, ಹೌದಾ? ನಂದಾ? ಕಂಡವರ್ದಾ? ಹಿಂದಿಲ್ಲ ಮುಂದಿಲ್ಲ ಯಾರತ್ರ ಹೇಳ್ಕಳ್ಳಿ ? ಜೋರಾಗ್ ಅಳಕು ಆಗ್ತಿಲ್ಲ...

ತಲೆ ಗಿರ್ ಅಂದಂಗಾಗಿ ಕೆಂಚೀರಪ್ಪ ಮನೆಗೆ ಹತ್ತಿರದ ಬೀದಿ ಕಡೆ ಸೈಕಲ್ ತಿರುವಿದ. ಮನೆ ಮುಂದೆ ಜನವೋ ಜನ. ಊರೇ ಸೇರಿತ್ತು. ಅಲಲ ಕೆಮ್ಮು, ವಾಸನೆ, ಪ್ರೀತ, ಹಾದರ ಮುಚ್ಚಿಟ್ರಾಯ್ತದಾ? ಹೆಂಗೋ ಊಸಿನ್ ವಾಸ್ನೆಯಂಗ್ ಸುದ್ದಿ ಹಲ್ಡದೆ. ನಾಗವೇಣಿ ಸಮಾಚಾರ ಆನೆ ಬಾಯಾಗಳ ಕಬ್ಬಾಗ್ ಓಗದೆ ಅಂತ ಗಾಬರಿಯಿಂದಲೇ ಬಂದ. ಜಗಲಿಕಟ್ಟೆ ಮೇಲೆ ಅವ್ವ ನೆಲ ಬಡದು ಅಳ್ತಿದ್ದಾಳೆ! ವರಾಂಡದ ಮುಂದೆ ಹೋಗಿ ಜನ ಸರಿಸಿ ನೋಡಿದ ಒಂದು ಕ್ಷಣ ಗುಂಡಿಗೆನೇ ನಿಂತಂತಾಯ್ತು! ನಾಗವೇಣಿ ಹೆಣವಾಗಿ ಮಲಗಿದ್ದಾಳೆ! ಮೊದಲೇ ಸುತ್ತುತ್ತಿದ್ದ ತಲೆ ಹಿಡಿದುಕೊಂಡವನೇ ಅವ್ವನ ಮಗ್ಗುಲಲ್ಲಿ ಕುಸಿದ. ಯಾರೋ ನೀರು ಕುಡಿಸಿದ್ರು. ಅವ್ವ ಒದರ್ತಾನೇ ಇದ್ಲು... ಮಾಡದೋರ ಪಾಪ ಆಡ್ದೋರ ಬಾಯಾಗಪ್ಪ. ನೀ ವತ್ರಿಕ್ ಹೋದಾಗಿಂದ ಮೈಮೇಲೆ ದೆವ್ವ ಬಂದಂಗಾಡಿ ಅದೇನೋ ಮಬೈಲ್ ಕಾಣ್ತಿಲ್ಲ ಅಂತ ಕೂಗಾಡಿ ನಿಂಗೆ ನಂಗೆ ಬಾಯಿಗ್ ಬಂದಂಗ್ ಬೈದು ಹೊಲತ್ತವ ನೀ ಇದಿಯಂತ ಹೋದೋಳು ಇಗಳಪ್ಪ ಹಿಂಗ್ ಹೆಣವಾಗಿ ಬಂದಾಳೆ. ಬಾವಿಸುತ್ತಾ ಹುಚ್ಚಿತರ ಕುಣಿದಾಡಿದಳೆ, ಕಾಲ್ ಜಾರ್ತಂತೆ ಬಾವ್ಯಾಗ್ ಬಿದ್ದಾಳೆ. ಪಕ್ಕದ ಹೊಲದ ತಿಮ್ಮಣ್ಣ ಏನೋ ಶಬ್ದ ಆತಂತ ನೋಡಿದರೆ ನಿನ್ನೆಂಡ್ರು ಮುಳುಗ್ತಿದ್ಲಂತೆ ಯಾರ್ಯಾನ್ರೋ ಕೂಗಿ ಹಿಡಿಯೋವಷ್ಟತ್ತಿಗೆ ಜೀವ ಹೋಗಿತ್ತಪ್ಪೋ... ಕೆಂಚೀರ... ಏನಾತೋ ನಿನ ಬಾಳು... ಎಲ್ಲಿಗ್ ಹೋಗಿದ್ಯಪ್ಪಾ... ನೀ ಅಲ್ಲಿದ್ದಿದ್ರೆ ನಿನ ಹೆಂಡ್ರು ಉಳಿತಿದ್ಲೇನೋ... ಅದೇನಪ್ಪ ಬಂಗಾರನೇನೋ ಆ ಮಬೈಲು... ಗಂಡನ್ ಹುಡುಕ್ಲಿಲ್ಲ... ಅತ್ತೆನ ಹುಡುಕ್ಲಿಲ್ಲ... ಬದುಕ್ನೂ ಹುಡುಕ್ಲಿಲ್ಲ... ಅದೇನೋ ಡಬ್ಬ ಹುಡುಕಿ ಸತ್ಲಲ್ಲೋ...

ಅವ್ವ ಇನ್ನೂ ಅಬ್ಬರಿಸಿ ಅಳ್ತಾ ಇದ್ಲು.

ಕೆಂಚೀರ ಆ ಬಿಳಿ ಕೈಗಳನ್ನ ಆ ಗುಂಪಿನಲ್ಲಿ ಹುಡುಕ್ತಿದ್ದ; ಮೊಬೈಲು ನಿಕ್ಕರ್ ಜೇಬೊಳಗೇ ಬೆಚ್ಚಗೆ ಕುಂತಿತ್ತು!

## ಸಂತೆಬೆನ್ನೂರು ಫೈಜ್ನಟ್ರಾಜ್

ಸಂತೆಬೆನ್ನೂರು ಫೈಜ್ನಟ್ರಾಜ್ ಎಂಬ ಕಾವ್ಯನಾಮದಲ್ಲಿ ತಮ್ಮ ಬರಹಗಳನ್ನು ಪ್ರಕಟಿಸುವ ಸೈಯದ್ ಫೈಜುಲ್ಲಾ ದಾವಣಗೆರೆ ಜಿಲ್ಲೆಯ ಸಂತೆಬೆನ್ನೂರಿನವರು. ಕನ್ನಡ ಅಧ್ಯಾಪಕರು. 'ಹಬ್ಬಿದಾ ಮಲೆ ಮಧ್ಯದೊಳಗೆ' ಎಂಬ ಕಥಾಸಂಕಲನ ಸೇರಿದಂತೆ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.